ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಮೊದಲು ೨೨ ಸಾವಿರ ರೂಪಾಯಿಗೆ ಕೊಡುತ್ತೇವೆ ಎಂದು ಹೇಳಿದ್ದರು. ಈಗ ೫೩ ಸಾವಿರ ರೂಪಾಯಿಗಳೆಂದು ಹೇಳುತ್ತಿದ್ದಾರೆ. ಆದ್ದರಿಂದ ಅವರು ಕಟ್ಟಿರುವ ರೊಕ್ಕವನ್ನಾದರೂ ವಾಪಸು ಕೊಡಿಸಿ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ಸಬ್ಸಿಡಿ ಕೊಡುವುದಕ್ಕೆ ಹೌಸಿಂಗ್‌ಬೋರ್ಡ್‌ನಲ್ಲಿ ಹಣವಿಲ್ಲ. ಇನ್ನು ಮುಂದೆ ಈ ರೀತಿ ಆಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಬಯಸುತ್ತೇನೆ. ೭೪ ಮನೆಗಳನ್ನು ನಿರ್ಮಾಣ ಮಾಡಬೇಕಾಗಿದ್ದ ೫-೬ ಸಾರಿ ಟೆಂಡರ್‌ವನ್ನು ಕರೆದಿದ್ದೇವೆ. ಸಬ್ಸಿಡಿ ಕೊಡುವುದಕ್ಕೆ ಹೌಸಿಂಗ್‌ಬೋರ್ಡ್‌ನಲ್ಲಿ ಹಣ ಇಲ್ಲ. ಉದ್ದೇಶಪೂರ್ವಕವಾಗಿ ಹಣವನ್ನೇನೂ ಹೆಚ್ಚಿಗೆ ಖರ್ಚು ಮಾಡಿಲ್ಲ. ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಇದರಲ್ಲಿ ಕಂಟ್ರಾಕ್ಟರ್‌ಗಳ ತಪ್ಪಿದೆಯೆ ? ಅಥವಾ ಅಧಿಕಾರಿಗಳ ತಪ್ಪಿದೆಯೇ ? ಎಂಬುದನ್ನು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ.—ಕಂಟ್ರಾಕ್ಟರ್ ೨೫ ಪರ್ಸೆಂಟ್ ಹಣವನ್ನು ತೆಗೆದುಕೊಂಡು ಹೋಗಿದ್ದಾನೆ. I will find out a way and see if I can solve it. ಅಧಿಕಾರಿಗಳ ಮೇಲೆ ನಾವು ಯಾವರೀತಿ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ ?

ಶ್ರೀ ಬಿ.ಹೆಚ್. ಯಂಕಾನಾಯಕ್.—ಇದರಲ್ಲಿ ಯಾರ ತಪ್ಪಿದೆ ? ಆ ಬಡವರು ಕಟ್ಟಿರುವ ದುಡ್ಡಿಗೆ ಬಡ್ಡಿಯನ್ನಾದರೂ ಕೊಡಿಸಿ.

ಅಧ್ಯಕ್ಷರು.—ಯಂಕಾನಾಯ್ಕರೆ, ದಯವಿಟ್ಟು ಕೂಡಿ. ನಿಮಗೆ ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಛೇಂಬರ್‌ಗೆ ಬಂದು ನನ್ನನ್ನು ಭೇಟಿ ಮಾಡಿದರೆ ಅವರ ಪ್ರಾಬ್ಲಂ ಏನು ಇದೆ ಅದನ್ನು ಸಾಲ್ವ್ ಮಾಡುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪ್ರದೇಶಕ್ಕೆ ನೀರು ಸರಬರಾಜು ಬಗ್ಗೆ

೨೯೩. ಶ್ರೀ ಎ, ಎಂ. ಹಿಂಡಸಗೇರಿ (ಹುಬ್ಬಳ್ಳಿ). ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪ್ರದೇಶಕ್ಕೆ ನೀರು ಸರಬರಾಜು ಆಗುತ್ತಿರುವ ಬಗ್ಗೆ ಧಾರವಾಡ ಜಿಲ್ಲಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆಯೆ :

೨ ಈ ರೀತಿಯ ಅನಾರೋಗ್ಯಕರ ನೀರನ್ನು ಹುಬ್ಬಳ್ಳಿ ಧಾರವಾಡಗಳ ಜನತೆಗೆ ಸರಬರಾಜ ಆಗುತ್ತಿರುವ ಹೊಣೆಯನ್ನು ಕರ್ತವ್ಯ ಚ್ಯುತಿ ಅಧಿಕಾರಿಗಳ ಮೇಲೆ ಧಾರವಾಡ ಜಿಲ್ಲಾಧಿಕಾರಿಗಳು ಹೊರಿಸಿದ್ದಾರೆಯೇ :

೩ ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧ ಹೌದು

೨ ಹೌದು

೩ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಯಿತು. ಅದರಲ್ಲಿ ಒಬ್ಬ ಮಂಡಲಿಯ ಅಧಿಕಾರಿಯನ್ನು ಬಾಕಿ ಇರುವ ವಿಚಾರಣೆ ಮೇಲೆ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಪ್ರದೇಶಕ್ಕೆ ಅನಾರೋಗ್ಯಕರವಾದ ನೀರನ್ನು ಸರಬರಾಜು ಮಾಡಿದ್ದರಿಂದ ಅಲ್ಲಿನ ಜನರಿಗೆ ಬಹಳ

ತೊಂದರೆಯಾಗಿದೆ, ಮಾನ್ಯ ಮುಖ್ಯಮಂತ್ರಿಗಳು ಬೇಕಾದರೆ ಹೋಗಿ ನೋಡಲಿ. ಆನಾರೋಗ್ಯಕರ ನೀರನ್ನು ಸರಬರಾಜು ಮಾಡಿದ್ದರ ಬಗ್ಗೆ ಒಂದು ವರದಿಯನ್ನು ಕೊಡುವಂತೆ ಮಾನ್ಯ ಮಂತ್ರಿಗಳು ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ತದೇಶ ನೀಡಿದ್ದರು. ಅದರ ಪ್ರಕಾರ ಆ ಜಿಲ್ಲಾಧಿಕಾರಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ನೀರು ಸರಬರಾಜಿನ ಹೊಣೆಯನ್ನು ಹೊತ್ತ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಿರುವುದಾಗಿ ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಿದ್ದಾರೆ.

ಈಗ ಹಂತೆ ರಿಪೋರ್ಟ್ ಮಾಡಿದ್ದಾರೆ, ರಿಪೋರ್ಟ್ ಮಾಡಿರುವ ಅಧಿಕಾರಿ ಯಾರು ಎನ್ನುವುದಕ್ಕೆ ಸ್ವಲ್ಪ ವಿವರವಾಗಿ ತಿಳಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಮತ್ತೆ ನನಗೆ ಬಂದಿರುವ ವರದಿ ಪ್ರಕಾರ ಯಾರಿಗೆ ಶಿಕ್ಷೆಯನ್ನು ಕೊಡಬೇಕಾಗಿತ್ತೋ ಅವರಿಗೆ ಶಿಕ್ಷೆಯನ್ನು ಕೊಟ್ಟಿಲ್ಲ. ಬೇರೆಯವರಿಗೆ ಕೊಟ್ಟಿರುತ್ತಾರೆ. ಈ ಕ್ರಮ ಸರಿಯಾದುದಲ್ಲ. ವರದಿಯಲ್ಲಿ ಆರೀತಿ ಇರುತ್ತದೆ. ಅದರ ಸಲುವಾಗಿ ತಪ್ಪು ಮಂಜಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಅಲ್ಲಿಯ ಅಧಿಕಾರಿಗಳ ಮೇಲೆ ರಿಪೋರ್ಟ್ ಬಂದಿರುವುದು ನಿಜ. ವರದಿ ಬಂದನಂತರ ಯಾರು ಅಧಿಕಾರಿರುತ್ತಾರೆ ಅವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಬೋರ್ಡ್ ಅಧಿಕಾರಿ ಮತ್ತೊಬ್ಬ ಪಿ, ಡಬ್ಲ್ಯೂ. ಡಿ. ಯಿಂದ ಡೆಪ್ಯೂಟ್ ಆದ ಅಧಿಕಾರಿ. ಅವರ ಹೆಸರುಗಳು ನನ್ನಲ್ಲಿ ಇಲ್ಲ, ಬೇಕಾದರೆ ನಂತರ ತಿಳಿಸುತ್ತೇನೆ.

ಶ್ರೀ ಎ. ಎಂ. ಹಿಂಡಸ್ಗೇರಿ.—ಮಾನ್ಯ ಅಧ್ಯಕ್ಷರೇ, ಜಲ ಮಂಡಳಿಯಿಂದ ಕಾರ್ಪೊರೇಷನ್‌ಗೆ ನೀರಿನ ಪೂರೈಕೆಯಾಗುವ ಬಗ್ಗೆ ವಿಳಂಬವಾಗುತ್ತಿದೆ. ಈಗಾಗಲೇ ನೀರು ಸಮರ್ಪಕವಾಗಿ ಬಂದಿದ್ದರೂ, ನೀರಸಾಗರ, ಮಲಪ್ರಭೆಯಲ್ಲಿ ನೀರು ತುಂಬಿದ್ದರೂ ಸಹ ಹುಬ್ಬಳ್ಳಿ ನಗರಕ್ಕೆ ನೀರು ಪೂರೈಕೆಯಾಗುತ್ತಿಲ್ಲ. ಸರಿಯಾಗಿ ನೀರು ಪೂರೈಕೆಯಾಗುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವಿ ದೇಶಪಾಂಡೆ.—ಆಯಿತು, ವ್ಯವಸ್ಥೆ ಮಾಡುತ್ತೇನೆ.

ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರವು ಹಂಚಿಕೆ ಮಾಡಿರುವ ನಿವೇಶನಗಳ ಬಗ್ಗೆ

ಶ್ರೀಮತಿ ಶ್ರೀ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರವು ವಿವೇಚನಾ ಕೋಟಾದಲ್ಲಿ ಕಲಾವಿದರು, ಪತ್ರಿಕೋದ್ಯಮಿಗಳು, ಕ್ರೀಡಾಪಟುಗಳು ಸ್ವಾತಂತ್ರ್ಯ ಹೋರಾಟಗಾರರು ಮಹಿಳೆಯರು ಅನಿವಾಸಿ ಭಾರತೀಯರು ಮತ್ತು ಸಾರ್ವಜನಿಕರಿಗೆ ಮುಂತಾದ ವರ್ಗದವರಿಗೆ ೧೯೮೫-೮೬, ೮೬-೮೭ ಮತ್ತು ೧೯೮೮ರ ಆಗಸ್ಟ್ ಅಂತ್ಯದವರೆಗೆ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ? (ಹೆಸರು ಮತ್ತು ನಿವೇಶನಗಳ ಹೆಸರುಗಳನ್ನು ಒದಗಿಸುವುದು)

ಆ) ನಿವೇಶನ ಹಂಚಿಕೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನುಸರಿಸಿರುವ ವಿಧಾನವೇನು ?

ಇ) ಪ್ರಾಧಿಕಾರದವರು ನಿವೇಶನಗಳ ಹಂಚಿಕೆಗಾಗಿ ಕೆಲವೊಂದು ಅರ್ಜಿ ಪ್ರಕರಣಗಳನ್ನು ಪರಿಗಣಿಸಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮವೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೩೫ ಬಿಡಿಎ ನಿವೇಶನಗಳು ಹೆಸರು ಮತ್ತು ನಿವೇಶನದ ಅಳತೆಯ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಬಿಡಿಎ ನಿವೇಶನಗಳನ್ನು ೧೯೮೪ರ ನಿವೇಶನ ಹಂಚಿಕೆ ನಿಯಮಾವಳಿಗಳು ನಿಯಮ ೫ ಹಾಗೂ ಸರ್ಕಾರವು ತನ್ನ ಪತ್ರದ ಸಂಖ್ಯೆ ವನ ೧೩ ಬಿಸ್ಸಿ ಎಂಎಸ್‌ಎಕ್ಸ್ ೮೬, ದಿನಾಂಕ ೩೦. ೧೦. ೧೯೮೬ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಹಂಚಿಕೆ ಮಾಡಲಾಗುತ್ತದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.